ವಿರೋಧ ಮಾಡುತ್ತಿದ್ದಾರೆ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ತಮ್ಮ ಮೂಲಕ ಅವರಲ್ಲಿ ಮನವಿ ಮಾಡುತ್ತೇನೆ, ಸದನ ನಡೆಸುವುದಕ್ಕೆ ಬೇಕಾದಂಥ ವಾತಾವರಣವನ್ನು ಅವರು ನಿರ್ಮಿಸಿ ಕೊಡಬೇಕು. ಈಗಾಗಲೇ ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಹರಿಜನರ ಕೊಲೆಯಾಗಿದೆ, ರೈತರಿಗೆ ಅನ್ಯಾಯವಾಗಿದೆ ಎನ್ನುವುದನ್ನೆಲ್ಲಾ ಹೇಳಿದ್ದಾರೆ, ಅದಕ್ಕೆಲ್ಲಾ ಉತ್ತರ ಹೇಳಿದ್ದೇವೆ. ಇವುಗಳಿಗೆ ಉತ್ತರ ಹೇಳುವುದಕ್ಕೂ ಕೂಡ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ರೈತರಿಗೆ ಏನೇನು ಅನ್ಯಾಯವಾಗಿದೆ ಎಂದು ನಿನ್ನೆಯೆಲ್ಲಾ ಚರ್ಚೆ ಮಾಡಿದ್ದೀರಿ. ಅದಕ್ಕೆ ಉತ್ತರ ಹೇಳುವುದಕ್ಕೂ ತಾವು ಇವತ್ತು ಅವಕಾಶ ಮಾಡಿಕೊಟ್ಟಿದ್ದೀರಿ. ಆದರೆ ಈಗ ಯಾವುದೇ ಕಲಾಪ ನಡೆಯಬಾರದು ಎನ್ನುವುದು ಅವರ ನಿರ್ಣಯವಾಗಿದ್ದರೆ ಏನು ಮಾಡಬೇಕೆನ್ನುವುದನ್ನು ನಾವು ತಮಗೆ ಬಿಟ್ಟಿದ್ದೇವೆ. ಅದಕ್ಕಾಗಿ, ನಾನು ತಮ್ಮ ಮೂಲಕ ಅವರನ್ನು ಮನವಿ ಮಾಡುವುದು ಇಷ್ಟೇ, ಪ್ರಶ್ನೋತ್ತರಗಳು ಈ ಸದನದ ಸದಸ್ಯರ ಹಕ್ಕು, ತಾವು ಅದರ ಮಾಲೀಕರು; ಇದನ್ನು ನಡೆಸಿಕೊಡಬೇಕು ಎಂದು ಅವರಲ್ಲಿ ಕೇಳುತ್ತೇವೆ. ಕೇವಲ ಒಂದು ಶಾಸನಕ್ಕಾಗಿ ಯಾವುದೇ ಕಲಾಪವನ್ನು ನಡೆಯಗೊಡುವುದಿಲ್ಲವೆಂದರೆ ನಾನು ಅದನ್ನು ಅವರ ವಿವೇಚನೆಗೇ ಬಿಡುತ್ತೇನೆ. ಸಾಕಷ್ಟು ಅನುಭವಿಗಳು, ಸುಮಾರು 4-5-6 ಸಲ ಗದ್ದುಬಂದು ಸದನವನ್ನು ನಡೆಸಿರತಕ್ಕಂಥ ಅನುಭವೀ ಶಾಸಕರಿದ್ದಾರೆ. ಅವರ ವಿವೇಚನೆಗೇ ಬಿಡುತ್ತೇನೆ. ತಾವು ಅನುಮತಿ ಕೊಟ್ಟರೆ, ಸರ್ಕಾರ ತನ್ನ ಕರ್ತವ್ಯವನ್ನು ಮಾಡುವುದಕ್ಕೆ ಸಿದ್ಧವಾಗಿದೆ. ಯಾವ ವಿಷಯವನ್ನು ಮೊದಲು ತೆಗೆದುಕೊಳ್ಳಬೇಕು ಎನ್ನುವುದನ್ನು ತಮ್ಮ ನಿರ್ಣಯಕ್ಕೇ ಬಿಡುತ್ತೇವೆ.

## 3. ಶಾಸನರಚನಾ ಕಾರ್ಯಕಲಾಪ

**ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2000**

**ಪರ್ಯಾಲೋಚನಾ ಪ್ರಸ್ತಾಪ**

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಅಧ್ಯಕ್ಷರೇ, ''2000ದ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

**ಪ್ರಸ್ತಾವವನ್ನು ಮಂಡಿಸಲಾಯಿತು**

(ಗೊಂದಲ)

(ಸನ್ಮಾನ್ಯ ಸದಸ್ಯರಾದ ಶ್ರೀ ಪಿ.ಜಿ.ಆರ್.ಸಿಂಧ್ಯಾ ಅವರು ಸದನದ ಬಾವಿಯಿಂದ

ತಮ್ಮ ಪೀಠಕ್ಕೆ ತೆರಳಿ ಮಾತನಾಡಿದರು)

+ ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಇಂಥ ಅವಮಾನಕರವಾದ ಸಂಗತಿ ಮತ್ತೊಂದು ಇಲ್ಲ. ದುರುದ್ದೇಶದಿಂದ ಈ ಮಸೂದೆಯನ್ನು ಆಡಳಿತ ಪಕ್ಷದವರು ತಂದಿದ್ದಾರೆ ಎನ್ನತಕ್ಕಂಥ ವಿಚಾರವನ್ನು ಹೇಳಿದ್ದೇವೆ. ಇವತ್ತು ಇಡೀ ರಾಷ್ಟ್ರದಲ್ಲೇ ಇಂಥ ಒಂದು ಉದಾಹರಣೆ ಇಲ್ಲ. ಚುನಾವಣೆ ಆಯೋಗಕ್ಕೆ ಸರ್ಕಾರ ಕೊಟ್ಟಿರತಕ್ಕಂಥ ಅಧಿಕಾರವನ್ನು ಕಸಿದುಕೊಂಡು ಚುನಾವಣೆ ಮಾಡಲಿಕ್ಕೆ ಇವರು ಹೊರಟಿದ್ದಾರೆ. ಇದು ಪ್ರಜಾಪ್ರಭುತ್ವ ವಿರೋಧ ಕ್ರಮ. ನಿಮ್ಮ ಮೂಲಕವಾಗಿ ಸರ್ಕಾರದವರ ಮನಸ್ಸನ್ನು ಒಲಿಸಲಿಕ್ಕೆ ನಾವು ಬಹಳ ಪ್ರಯತ್ನ ಮಾಡಿದೆವು. ನಾವು ಇಲ್ಲಿ ಧರಣಿ ಮಾಡಬೇಕು, ಸಭಾತ್ಯಾಗ ಮಾಡಬೇಕು, ಕಾರ್ಯಕಲಾಪ ನಡೆಯದ ಹಾಗೆ ಸದನವನ್ನು ನಿಲ್ಲಿಸಬೇಕು ಎನ್ನತಕ್ಕಂಥ ಇಚ್ಛೆ ನಮಗೆ ಇಲ್ಲ. ಚಿಂತಾಮಣಿಯಲ್ಲಿ ಹರಿಜನರ ಕೊಲೆ ಆದ ಬಗ್ಗೆ ಇಲ್ಲಿ ಚರ್ಚೆ ಆದಾಗ ಅದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ ಎಂದು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಯವರು ಹೇಳಿದರು. ಅಲ್ಲಿ ಕೊಲೆ ಆಯಿತು ಅದಕ್ಕೆ ಸರ್ಕಾರದ ಕಡೆಯಿಂದ ಉತ್ತರ ಕೊಟ್ಟಿದ್ದೀರಿ. ನಾವೇನೂ ಸುಳ್ಳು ಹೇಳಲಿಲ್ಲ. ಆ ರೀತಿ ಸತ್ಯಕ್ಕೆ ದೂರವಾದಂಥ ಮಾತನ್ನು ನಾವೇನೂ ಹೇಳಲಿಲ್ಲ. ತೆಂಗಿನ ಮರಕ್ಕೆ ನುಸಿ ರೋಗ ಬಂದಿರತಕ್ಕಂಥದ್ದು ನಿಜ. ಅದನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದು ನಿಜ. ನಮಗೆ ಜನ ಗೆಲ್ಲಿಸಿ ಇಲ್ಲಿ ಕಳುಹಿಸಿರುವುದು ಅದಕ್ಕೋಸ್ಕರವೇ. ಆಡಳಿತ ಪಕ್ಷದವರಾದ ನಿಮಗೆ ಬೆಂಬಲ ಸಿಕ್ಕಿದೆ ಎನ್ನತಕ್ಕಂಥ ಒಂದೇ ದೃಷ್ಟಿಯನ್ನು ಇಟ್ಟುಕೊಂಡು ಇವತ್ತು ಮನಸ್ಸೋ ಇಚ್ಛೆ ಮಾಡುವುದು ಸರಿಯಲ್ಲ. ಚುನಾವಣಾ ಆಯೋಗಕ್ಕೆ ಕೊಟ್ಟಿರತಕ್ಕಂಥ ಅಧಿಕಾರವನ್ನು ವಾಪಸ್ಸು ಪಡೆದಿರತಕ್ಕಂಥ ಉದಾಹರಣೆ ಇಡೀ ರಾಷ್ಟ್ರದಲ್ಲಿ ಎಲ್ಲಿಯಾದರೂ ಇದ್ದರೆ ಅದನ್ನು ತೋರಿಸಿ.

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, ಚುನಾವಣೆಯನ್ನು ನಡೆಸುವುದು ಚುನಾವಣಾ ಆಯೋಗವೇ ಹೊರತು ಸರ್ಕಾರ ಅಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ· ತಾವು ಆ ಸ್ಥಾನದಲ್ಲಿ ಕುಳಿತುಕೊಂಡು ಸತ್‌ಸಂಪ್ರದಾಯಗಳನ್ನು ಕೂಡಿಸಬೇಕು, ಬೆಳೆಸಬೇಕು ಎನ್ನುವ ಘನವಾದ ಉದ್ದೇಶವನ್ನು ಇಟ್ಟುಕೊಂಡು ಬಂದಿರತಕ್ಕಂಥವರು ತಾವು. ಇವತ್ತು ಈ ಸರ್ಕಾರ ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿದೆ. ವಿರೋಧ ಪಕ್ಷವನ್ನು ಸಂಪೂರ್ಣವಾಗಿ ಕರ್ನಾಟಕದಲ್ಲಿ ದಮನ ಮಾಡಬೇಕು ಎನ್ನುವ ದುರುದ್ದೇಶ ಇವರದು ಇದ್ದರೆ, ತಮ್ಮ ಕೊರಳಿಗೆ ತಾವೇ ಹಗ್ಗವನ್ನು ಇವತ್ತಿನ ದಿವಸ ಹಾಕಿಕೊಳ್ಳುತ್ತಿದ್ದಾರೆ. 4 ಜನ·ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಸಮಾಧಾನ ಮಾಡುವುದಕ್ಕೆ ಹೋಗಿ 40 ಜನರನ್ನು ಇವರು ವಿರೋಧಿಗಳನ್ನಾಗಿ ಮಾಡಿಕೊಳ್ಳುತ್ತಾರೆ. ಇದರಿಂದ ಆಡಳಿತ ಪಕ್ಷಕ್ಕೆ ಸರ್ಕಾರಕ್ಕೆ

ಕುತ್ತು ಆಗುತ್ತದೆ. ಆದ್ದರಿಂದ ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ, ಮಾನ್ಯ ಖರ್ಗೆಯವರಿಗೆ ಏನಾಯಿತು? ಮಾನ್ಯ ಹೆಚ್.ಕೆ.ಪಾಟೀಲರಿಗೆ ಏನಾಯಿತು? ಈ ಸದನದಲ್ಲಿ ಅವರುಗಳು ಮಾಡಿರತಕ್ಕಂಥ ಭಾಷಣಗಳು ಏನಿವೆ ಅದರಂತೆ ಏಕೆ ನಡೆದುಕೊಳ್ಳುತ್ತಿಲ್ಲ? ನಮ್ಮ ಪಕ್ಷ ಅಧಿಕಾರದಲ್ಲಿ ಇದ್ದಂಥ ಸಂದರ್ಭದಲ್ಲಿ ಆಡಳಿತ ಪಕ್ಷಕ್ಕೆ, ಸರ್ಕಾರಕ್ಕೆ ಇದ್ದಂಥ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನಾವು ಕೊಟ್ಟಿವು. ಆದರೆ ಇವರು ಮಾಡುತ್ತಿರತಕ್ಕಂಥದ್ದಾದರೂ ಏನು? ನಿಸ್ಪಕ್ಷಪಾತವಾಗಿ ಇರಬೇಕು ಎನ್ನುವ ಉದ್ದೇಶದಿಂದ ನಾವು ಅಧಿಕಾರವನ್ನು ಕೊಟ್ಟಿವು. ನಿಮ್ಮ ಸರ್ಕಾರ ಬಂದು ಇನ್ನೂ 180 ದಿವಸಗಳು ಆಗಿಲ್ಲ ಇಷ್ಟು ಬೇಗ ಅಧಿಕಾರವನ್ನು ವಾಪಸ್ಸು ಪಡೆಯುವುದಕ್ಕೆ ತಯಾರಾಗಿರುವುದಕ್ಕೆ ನಿಮಗೆಲ್ಲ ನಾಚಿಕೆ ಆಗಬೇಕು. ಚುನಾವಣಾ ಆಯೋಗಕ್ಕೆ ಅಧಿಕಾರವನ್ನು ಕೊಡಬೇಕೆಂದು ಹೇಳಿದವರು ನಿಮ್ಮ ಕಾಂಗ್ರೆಸ್ ಪಕ್ಷದವರೇ. ಚುನಾವಣೆ ಆಯೋಗಕ್ಕೆ ನಾವು ಅಧಿಕಾರವನ್ನು ಕೊಟ್ಟಿವು. ಚುನಾವಣಾ ಆಯೋಗಕ್ಕೆ ಗೈಡ್‌ಲೈನ್ಸ್ ಕೊಡತಕ್ಕಂಥ ಅಧಿಕಾರ ನಿಮಗೆ ಇದೆ. ಇಷ್ಟು ಇದ್ದರೂ ಸಹಿತ ಪುನಃ ನೀವು ಯಾವ ಕಾರಣಕ್ಕೋಸ್ಕರ ಅದನ್ನು ವಾಪಸ್ಸು ಪಡೆಯುವುದಕ್ಕೆ ಹೊರಟಿದ್ದೀರಾ? ರಾಷ್ಟ್ರದ ಇತಿಹಾಸದಲ್ಲಿ ಅಧಿಕಾರ ವಿಕೇಂದ್ರೀಕರಣದ ವಿಚಾರದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ವಿಚಾರದಲ್ಲಿ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಮೀಸಲಾತಿಯನ್ನು ಕೊಡತಕ್ಕಂಥ ವಿಚಾರದಲ್ಲಿ ಹೆಣ್ಣುಮಕ್ಕಳಿಗೆ ಮೀಸಲಾತಿಯನ್ನು ಕೊಡತಕ್ಕಂಥ ವಿಚಾರದಲ್ಲಿ ಕರ್ನಾಟಕ ರಾಜ್ಯದವರಾದ ನಾವು ಮುಂದಿದ್ದೇವೆ. ಅದಕ್ಕೆ ಈಗ ನಿಮ್ಮ ಸರ್ಕಾರದಿಂದ ಅಪಮಾನವನ್ನು ಮಾಡುತ್ತಿದ್ದೀರಿ. ಚಿಂತಾಮಣಿ ಘಟನೆಯಿಂದ ನಿಮ್ಮ ಆಡಳಿತ ಪಕ್ಷಕ್ಕೆ ಕಪ್ಪು ಚುಕ್ಕೆ ಬಂದಿದೆ ಎನ್ನುವುದನ್ನು ಮಾನ್ಯ ರಾಜ್ಯಪಾಲರು ಹೇಳಿದ್ದಾರೆ, ಇದು ನಾವು ಹೇಳಿರತಕ್ಕಂಥ ಮಾತು ಅಲ್ಲ. ಮತ್ತೊಂದು ಕಪ್ಪು ಚುಕ್ಕೆ ಬರದ ಹಾಗೆ ಶ್ರೀಮತಿ ಮೋಟಮ್ಮನವರು ಗಮನ ಹರಿಸಬೇಕು. ತಾವು ಕಾಂಗ್ರೆಸ್ಸಿನ ವರಿಷ್ಠ ಮಂಡಳಿಯಲ್ಲಿ ಇದ್ದೀರಿ. ಚುನಾವಣಾ ಆಯೋಗದಿಂದ ಪ್ರಜಾಪ್ರಭುತ್ವದ ವಿರೋಧ ಕ್ರಮವನ್ನು ಮಾಡುತ್ತಿದ್ದಾರೆ. ಯಾವುದೇ ಕಾರಣದಿಂದಲೂ ಸಹಿತ ಇದಕ್ಕೆ ಅವಕಾಶ ಮಾಡಿಕೊಡುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಪಿ.ಜಿ.ಆರ್.ಸಿಂಧ್ಯಾ ಅವರು ಸದನದ ಬಾವಿಗೆ ವಾಪಸ್ಸು ಮರಳಿದರು).

(ಗೊಂದಲ)

(ಸನ್ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಅವರು ಸದನದ ಬಾವಿಯಿಂದ ತಮ್ಮ ಪೀಠಕ್ಕೆ ತೆರಳಿ ಮಾತನಾಡಿದರು)

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದವರು ಲಾಭ ಮಾಡಿಕೊಳ್ಳುವ ಸಲುವಾಗಿ, ಅವರ ಕಡೆಯವರು ಲಾಭ

ಪಡೆದುಕೊಳ್ಳುವ ಸಲುವಾಗಿ ಈ ಬಿಲ್ಲನ್ನು ತರುತ್ತಿದ್ದಾರೆ. ಇದು ನಾವು ನಂಬಿಕೊಂಡು ಬಂದಿರತಕ್ಕಂಥ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಪೂರ್ಣವಾಗಿ ವಿರೋಧ ಆಗಿರುವಂಥದ್ದು. ಇಂಥ ಒಂದು ಮಸೂದೆಗೆ ನಾವು ಅವಕಾಶ ಕೊಡುವುದಿಲ್ಲ. ಮತ್ತು ಕೊಡಬಾರದು. ಈ ಒಂದು ಸದನ ಒಳ್ಳೆಯ ಸತ್‌ಸಂಪ್ರದಾಯವನ್ನು ಹಾಕಿಕೊಂಡು ಬಂದಿರುವಂಥದ್ದು ಆಗಿದೆ. ಮಾನ್ಯ ಅಧ್ಯಕ್ಷರೆ, ತಾವು ದಯವಾಡಿ ಇದರ ಬಗ್ಗೆ ವಿಚಾರ ಮಾಡಬೇಕು. ತಾವು ಇದರ ಬಗ್ಗೆ ಗಮನ ಹರಿಸಬೇಕು. ಮೊನ್ನೆ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಯಾವ ರೀತಿ ಲಾಟರಿ ಮುಖಾಂತರ ಅಧ್ಯಕ್ಷ ಉಪಾಧ್ಯಕ್ಷರ ಕೋಟಾ ಸ್ಥಾನ ನಿಗದಿ ಆಯಿತು ಎಂಬುದನ್ನು ನೋಡಿದಾಗ ಅಲ್ಲಿ ಯಾವುದೇ ರೀತಿಯ ಗೊಂದಲ ಆಗಿಲ್ಲ. ಇಂಥ ಒಂದು ವ್ಯವಸ್ಥೆಯನ್ನು ಬಿಟ್ಟು ಇವತ್ತು ಆಡಳಿತಪಕ್ಷದವರು ರಾಜಕೀಯ ಲಾಭ ಮಾಡಿಕೊಳ್ಳುವ, ಮಾಡಿಸಿಕೊಳ್ಳುವ ಸಲುವಾಗಿ ರೂಲಿಂಗ್ ಪಾರ್ಟಿಯವರನ್ನೇ ಡಾಮಿನೇಟ್ ಮಾಡುವ ಸಲುವಾಗಿ ಪ್ರತಿಪಕ್ಷದ ಶಾಸಕರುಗಳ ಹಕ್ಕನ್ನು ಕಿತ್ತುಕೊಳ್ಳಲಿಕ್ಕೆ, ಪ್ರತಿಪಕ್ಷವನ್ನು ದಮನ ಮಾಡಲಿಕ್ಕೇ ಮಸೂದೆಯನ್ನು ತರುವುದಕ್ಕೆ ಹೊರಟಿದ್ದಾರೆ. ಇದು ಅತ್ಯಂತ ನಾಚಿಕೆಗೇಡಿನ ಕೆಲಸವನ್ನು ಕಾಂಗ್ರೆಸ್ ಪಕ್ಷ ಮಾಡುತ್ತಾ ಇದೆ. ಪ್ರಜಾಪ್ರಭುತ್ವ ತಂತ್ರಕ್ಕೆ ಇವರು ಅಪಮಾನ ಮಾಡುತ್ತಿದ್ದಾರೆ. ಇದನ್ನು ತರುವುದರಿಂದ ನಾಳೆ ಇವರಿಗೆ ಉರುಳು ಆಗುತ್ತದೆ. ಕಾಂಗ್ರೆಸ್‌ಗೆ ಜನ ಪಾಠ ಕಲಿಸುತ್ತಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್ ಅವರು ಸದನದ ಬಾವಿಗೆ ವಾಪಸ್ಸು ಮರಳಿದರು).

(ಗೊಂದಲ)

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ಪ್ರತಿಪಕ್ಷದ ಮುಖಂಡರು ಅವರವರ ಜಾಗಕ್ಕೆ ಹೋಗಿ ಹೇಳಿರತಕ್ಕಂಥ ಎಲ್ಲವೂ ಕಡತಗಳಿಗೆ ಹೋಗಿದೆ. ಹೊಸ ಸಂಪ್ರದಾಯ ಏನೆಂದರೆ ಉಳಿದವರು ಬಾವಿಯಲ್ಲಿ ಕುಳಿತುಕೊಂಡಿರಬೇಕು, ಯಾರ್ಯಾರು ಮಾತನಾಡಬೇಕೋ ಅವರು ಅವರವರ ಸ್ಥಾನಕ್ಕೆ ಹೋಗಿ ಮಾತನಾಡುವುದು ಇದು ಹೊಸ ಸಂಪ್ರದಾಯ. ತಾವು ಅಪ್ಪಣೆ ಕೊಟ್ಟಿದ್ದೀರಿ ಅದಕ್ಕೆ ನನ್ನ ವಿರೋಧ ಇಲ್ಲ. 'ರಾಜ್ಯಾಂಗಕ್ಕೆ ವಿರೋಧವಾಗಿ ಕೆಲಸ ಮಾಡುತ್ತಾ ಇದ್ದಾರೆ, ನೀವು ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ಕೊಟ್ಟದ್ದನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದೀರಿ' ಎಂದು ಮಾನ್ಯ ಪಿ.ಜಿ.ಆರ್.ಸಿಂಧ್ಯಾ ಅವರು ಒಂದು ಮಾತನ್ನು ಹೇಳಿದ್ದಾರೆ. ಶಾಸಕಾಂಗ ಏನು ಮಾಡಬೇಕು, ನ್ಯಾಯಾಂಗ ಏನು ಮಾಡಬೇಕು ಕಾರ್ಯಾಂಗ ಏನು ಮಾಡಬೇಕು ಎಂದು ಎಲ್ಲದಕ್ಕೂ ಸಂವಿಧಾನ ಬದ್ಧವಾಗಿ ನಿರೂಪಣೆ ಮಾಡಿದ್ದಾರೆ. ಅದೇ ಸಂವಿಧಾನ ಚುನಾವಣಾ ಆಯೋಗ ಏನು ಕೆಲಸ ಮಾಡಬೇಕು ಎನ್ನುವುದನ್ನು ಸಹ ನಿಗದಿ ಮಾಡಿದೆ. ನಾವು ಚುನಾವಣಾ ಆಯೋಗದಿಂದ ಚುನಾವಣೆ ಮಾಡತಕ್ಕಂಥದ್ದನ್ನು ವಾಪಸ್ಸು

ಪಡೆಯುತ್ತಿಲ್ಲ. ಇದನ್ನು ನಾನು ನನ್ನ ಕಡೆಯಿಂದ ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಚುನಾವಣಾ ಆಯೋಗವೇ ಈ ಚುನಾವಣೆಯನ್ನು ಮಾಡುತ್ತದೆ. ಇದರ ಬಗ್ಗೆ ಯಾವ ಶಂಕೆಯನ್ನು ತಾವು ಇಟ್ಟುಕೊಳ್ಳಬೇಡಿ. ಸದನದಲ್ಲಿ ಏನಾಗುತ್ತಿದೆ ಎಂದರೆ ಧ್ವನಿ ಇದ್ದರೆ ಬದುಕಬಹುದು ಎನ್ನತಕ್ಕಂತ ವಾತಾವರಣ ಇದೆಯಲ್ಲಾ, ಧ್ವನಿಗಿಂತ ಮೇಲೆ ಬುದ್ಧಿಗೆ ಸ್ವಲ್ಪ ಕೆಲಸ ಕೊಟ್ಟರೆ ಎಲ್ಲವನ್ನೂ ನಿರಾಳವಾಗಿ ಮಾಡಬಹುದು. ಯಾವುದು ಸಂವಿಧಾನ ಬಾಹಿರ, ಯಾವುದು ರಾಜಕೀಯ ಪ್ರೇರಿತ ಅದನ್ನು ಅವರು ತಮ್ಮ ತಮ್ಮ ಸ್ಥಾನದಲ್ಲಿ ಇದ್ದು ಹೇಳಬಹುದು, ನಿಮ್ಮ ಅನುಕೂಲಕ್ಕಾಗಿ ಏನು ಮಾಡಿದ್ದೀರಿ ಅದನ್ನು ಅಲ್ಲಿ ಹೇಳಬಹುದು. ಅದನ್ನು ಬಿಟ್ಟು ಮಸೂದೆಯನ್ನೆ ನೋಡದೆ, ಅದರೊಳಗೆ ಏನಿದೆ ಎನ್ನುವುದನ್ನು ಗಮನಿಸದೆ ತಮಗೆ ಇಚ್ಛೆ ಬಂದ ಹಾಗೆ ಹೇಳುತ್ತಾ ಹೋದರೆ ನಮಗೆ ಇಚ್ಛೆ ಬಂದ ಹಾಗೆ ನಾವು ಹೇಳಬೇಕಾಗುತ್ತದೆ, ಆದರೆ ಅದು ಸದನದ ಸಂಪ್ರದಾಯ ಅಲ್ಲ. ಚುನಾವಣಾ ಆಯೋಗದಿಂದ ಚುನಾವಣೆಗೆ ಮಾಡಬೇಕಾದ ಪ್ರಕ್ರಿಯೆಗೆ ಯಾವ ಬಾಧಕವೂ ಇಲ್ಲ. ಚುನಾವಣಾ ಆಯೋಗವೇ ಮಾಡುತ್ತದೆ. ಲೋಕಸಭೆಗೆ, ವಿಧಾನಸಭೆಗೆ, ವಿಧಾನಪರಿಷತ್ತಿಗೆ ಹೇಗೆ ಚುನಾವಣೆಯನ್ನು ಮಾಡುತ್ತದೆ ಹಾಗೆಯೇ ಸಂವಿಧಾನದತ್ತವಾದ ಚುನಾವಣಾ ಆಯೋಗದ ಹಕ್ಕನ್ನು ನಾವು ಎಂದೂ ಕಿತ್ತುಕೊಳ್ಳುವುದಕ್ಕೆ ಹೋಗಿಲ್ಲ. ಇಲ್ಲಿ ಪ್ರಶ್ನೆ ಬಂದಿರತಕ್ಕಂಥದ್ದು ಏನೆಂದರೆ ಲೋಕಸಭೆಯದು ತೆಗೆದುಕೊಂಡರೆ ಒಂದು ಡಿ-ಲಿಮಿಟೇಷನ್ ಕಮಿಟಿ ಮಾಡಿ ಯಾವುದನ್ನು ಯಾವ ಯಾವ ಭಾಗಕ್ಕೆ ಕೊಡಬೇಕು ಎನ್ನತಕ್ಕಂತ ನಿರ್ಣಯ ಇದೆ. ಅದಕ್ಕಾಗಿ ಲೋಕಸಭಾ ಸಮಿತಿ ಒಂದು ಬರುತ್ತದೆ. ಅದನ್ನು ಅವರು ಮಾಡುತ್ತಾರೆ. ಮೀಸಲಾತಿಯನ್ನು ಯಾರಿಗೆ ಕೊಡಬೇಕು ಎನ್ನತಕ್ಕಂಥದ್ದನ್ನು ಎಲ್ಲಾ ಕಾಲಕ್ಕೂ ಸರ್ಕಾರವೇ ಮಾಡಿಕೊಂಡು ಬಂದಿದೆ. ಚುನಾವಣಾ ಆಯೋಗ ಮಾಡಿಲ್ಲ. ಈಗ ಈ ಸರ್ಕಾರ ಯಾವ ಕೆಲಸಗಳನ್ನು ಮಾಡಬೇಕೆಂದು ಹೇಳಿ ಈ ಶಾಸನದಲ್ಲಿ ಹೇಳಿದ್ದೇವೋ ಆ ಕೆಲಸ 1993ರ ಶಾಸನದಲ್ಲಿ ಏನೇನು ನಿಯಮಗಳು ಇದ್ದವೋ ಅದೇ ನಿಯಮಗಳಿಗೆ ವಾಪಸ್ಸು ಹೋಗುತ್ತಿದ್ದೇವೆ. ಅದಂತೆಯೇ ಹಿಂದೆ ಚುನಾವಣೆ ನಡೆದಿದೆ, ಅದರಂತೆಯೇ ಮೀಸಲಾತಿ ನಡೆದಿದೆ, ಅದರಂತೆಯೇ ರೊಟೇಷನ್ ನಡೆಯುತ್ತಾ ಇದೆ. ಸರ್ಕಾರ ಯಾವ ಬದಲಾವಣೆಯನ್ನೂ ಮಾಡಿಲ್ಲ. ಸರ್ಕಾರಕ್ಕೆ ಯಾವ ದುರುದ್ದೇಶವೂ ಇಲ್ಲ. ಚುನಾವಣಾ ಆಯೋಗ, ಕೇವಲ 5-6 ಜನ ಕುಳಿತುಕೊಂಡು, ಒಬ್ಬ ಚುನಾವಣಾಧಿಕಾರಿ ಆಯೋಗದ ಅಧಿಕಾರಿ.... ಈ ರಾಜ್ಯದ ಒಟ್ಟು ಜವಾಬ್ದಾರಿ ಇರುವ ಚುನಾಯಿತ ಪ್ರತಿನಿಧಿಗಳಿಗೇನು ಕೆಲಸ? ಅವರೇನು ಹೇಳಬೇಕು. ಒಂದೊಂದು ಶಾಸನಸಭೆಯಿಂದ ಆರಿಸಿ ಬಂದಿರುವ ಸದಸ್ಯರು ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಈ ಒಂದು ಮೀಸಲಾತಿಗಳನ್ನು.... ಇವರು ಅಲ್ಲಿ ಹೋಗಿ ಹೇಳಲಿ. ಇವರು ಅಲ್ಲಿ ಹೋಗಲು ತಯಾರಾಗಿಲ್ಲ. ಇಲ್ಲಿ ಕುಳಿತುಕೊಂಡು ಬಾವಿಯಲ್ಲಿ ಕುಳಿತುಕೊಂಡು ಕಪ್ಪೆ ವಟಗುಟ್ಟಿದ ಹಾಗೆ ವಟಗುಟ್ಟಿದರೆ ಏನು ಮಾಡಲಿ? ವಿಶಾಲವಾದ ಸಾಗರದಲ್ಲಿ ಈಜಾಡೋಣ. ಇದರಲ್ಲಿ ಸಂವಿಧಾನ ಬಾಹಿರವಾದುದೇನೂ ಇಲ್ಲ. 1997ರಲ್ಲಿ ಈ

ಮಸೂದೆಯನ್ನು ಈ ಸಭೆಯಲ್ಲಿ ತಂದಾಗ, ಚುನಾವಣೆಗಳಿರಲಿಲ್ಲ. ದುರುದ್ದೇಶಪೂರಿತವಾಗಿ, ಸೋಲುತ್ತೇವೆಂದು ಗೊತ್ತಾದ ಮೇಲೆ ರಾಜಕೀಯಪ್ರೇರಿತವಾಗಿ ಅದನ್ನು ಇವರು ತಂದರು. ಈ ಬದಲಾವಣೆಯನ್ನು ಹಿಂದಿನ ಸರ್ಕಾರದವರು ಜಾರಿಗೆ ತಂದರು. ಇದನ್ನು ನಾವು ತಂದಿದ್ದಲ್ಲ. 1993ರ ಚುನಾವಣೆಯಲ್ಲಿ ಏನಿತ್ತೋ, ಯಾವ ಚುನಾವಣೆಯನ್ನೇ ಹಿಂದೆ ನೀವು ಮಾಡಿದ್ದಿರೋ, ನಮ್ಮ ಕಾಲದಲ್ಲಿ ನಡೆದಿತ್ತೋ, ಆ ಚುನಾವಣಾ ಕಾಲಕ್ಕೆ ಹಿಂದಕ್ಕೆ ಹೋಗಿದ್ದೇವೆಯೇ ಹೊರತು, ಕಾನೂನು ಬಾಹಿರವಾಗಿ ಏನೂ ಮಾಡಿಲ್ಲ. ಚುನಾವಣಾ ಆಯೋಗಕ್ಕಿರುವ ಅಧಿಕಾರವನ್ನು ಕಿತ್ತುಕೊಂಡಿಲ್ಲ. ಇದು ರಾಜಕೀಯ ಪ್ರೇರಿತವಲ್ಲ. ಇವರಿಗೆ ಭೀತಿ ಬಂದಿದೆ. ಈ ಸರ್ಕಾರ ಚುನಾವಣೆ ಮಾಡುವುದರಿಂದ, ನಾವೆಲ್ಲರೂ ಸೋತು ಹೋಗಿ ಬಿಡುತ್ತೇವೆಂಬ ಭೀತಿಯಿಂದ ಇದನ್ನು ಮಾಡುತ್ತಿದ್ದಾರೆ.

(ಗೊಂದಲ)

ಆದುದರಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ, ಇದನ್ನು ಮತಕ್ಕೆ ಹಾಕಬೇಕಾಗಿ ಪ್ರಾರ್ಥನೆ ಮಾಡುತ್ತೇನೆ. ಅವರು ಮಾತನಾಡುವಾಗ ದಂಧೆ ಅಡ್ಡಬರಬಾರದೆಂಬ ನಿಯಮವಿದೆಯಲ್ಲ. ದಯಮಾಡಿ ಹೇಳಿ.

+ ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ನಾನು ತಮ್ಮ ಗಮನಕ್ಕೆ ತರುವುದಿಷ್ಟೆ, ನಾವು ಬೆಳಗ್ಗೆಯಿಂದ ತಮ್ಮ ಸಮ್ಮುಖದಲ್ಲಿ ನಡೆದ ಸಂಧಾನದಲ್ಲಿ ನಮ್ಮ ವಾದವನ್ನು ಬಹಳ ಸಮರ್ಪಕವಾಗಿ ಮಂಡಿಸಿದ್ದರೂ ಸಹ ಸರ್ಕಾರದವರು ತಾವು ಹಿಡಿದ ಹಠವನ್ನೇ ಹಿಡಿದಿದ್ದಾರೆ. ನಾವು ಕಳೆದ ಸಾರಿ ಸರ್ಕಾರ ನಡೆಸುತ್ತಿದ್ದವು. ನಮ್ಮ ಉದ್ದೇಶವೇನು? ಯಾವುದೇ ಚುನಾವಣೆ ಮುಕ್ತವಾಗಿ, ಪಕ್ಷಾತೀತವಾಗಿ, ಸಂವಿಧಾನಕ್ಕೆ ತಕ್ಕಂತೆ ನಡೆಯುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ನಾವು ಸರ್ಕಾರದಲ್ಲಿದ್ದರೂ ಅಧಿಕಾರ ತೆಗದುಕೊಳ್ಳಲಿಲ್ಲ. ಈ ಅಧಿಕಾರವನ್ನು ಎಲೆಕ್ಷನ್ ಕಮಿಷನರ್‌ಗೆ ಕೊಟ್ಟು, ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸಿ ಎಂದು ಗೈಡ್‌ಲೈನ್ಸ್ ಕೊಟ್ಟಿವು. ಆ ಗೈಡ್‌ಲೈನ್ಸ್ ಪ್ರಕಾರ ಇವರು ಚುನಾವಣೆ ನಡೆಸಿದರು. ಈ ಚುನಾವಣಾ ಸಂದರ್ಭದಲ್ಲಿ ಯಾವುದಾದರೂ ಅಹಿತಕರ ಘಟನೆ ನಡೆದಿದೆಯೇ? ಯಾವುದೇ ಪಕ್ಷದವರಲ್ಲಿ ಗೊಂದಲವಾಗಲೀ, ಒಬ್ಬರಿಗೊಬ್ಬರಲ್ಲಿ ವೈಷಮ್ಯವಾಗಲೀ ನಡೆದಿಲ್ಲ. ಸುಸೂತ್ರವಾಗಿ, ಆರೋಗ್ಯಕರವಾಗಿ ನಾವು ಕೊಟ್ಟಂತಹ ಗೈಡ್‌ಲೈನ್ಸ್ ಪ್ರಕಾರ ಚುನಾವಣಾ ಆಯೋಗದವರು ಚುನಾವಣೆ ನಡೆಸಿದ್ದಾರೆ. ನಾವು ಹೇಳುವುದಿಷ್ಟೆ, ಸರ್ಕಾರದವರು ತಾಲ್ಲೂಕು, ಜಿಲ್ಲಾ ಪಂಚಾಯತ್ ಚುನಾವಣೆಯನ್ನು ಅದೇ ರೀತಿಯ ಗೈಡ್‌ಲೈನ್ಸ್ ಕೊಟ್ಟು ಚುನಾವಣಾ ಆಯೋಗದಿಂದ ಅದನ್ನು ಮಾಡಿದರೆ ನಮಗೂ, ನಿಮಗೂ ಒಳ್ಳೆಯದು. ಇದರಲ್ಲಿ ರಾಜಕೀಯ ಹಸ್ತಕ್ಷೇಪ ಯಾವ ಪಕ್ಷದವರದೂ ಬೇಡವೆಂಬ ಉದ್ದೇಶ ನಮ್ಮದು. ಇವತ್ತು ತಾವು ಚುನಾವಣಾ ಆಯೋಗದ ಅಧಿಕಾರವನ್ನು

ಕೆತ್ತುಕೊಂಡಿದ್ದೀರಿ. ಕೇಂದ್ರದಲ್ಲಿ ಕೇಂದ್ರ ಚುನಾವಣಾ ಆಯೋಗವಿದೆ. ಆ ಆಯೋಗಕ್ಕೆ, ಬೀದರ್‌ನಲ್ಲಿ ಮೀಸಲು ಕ್ಷೇತ್ರವಿದೆ, ಅಲ್ಲಿ ಬೇಡ ಅದನ್ನು ಗುಲಬರ್ಗಾಕ್ಕೆ ಹಾಕಿ ಎನ್ನಲಾಗುತ್ತದೆಯೇ? ಅದೇ ರೀತಿ ಕರ್ನಾಟಕದಲ್ಲಿ ಮಳವಳ್ಳಿ ರಿಸರ್ವ್ ಕ್ಷೇತ್ರವಿದೆ, ಇದು ಬೇಡ ಕಿರುಗಾವಲು ಹಾಕಿ ಎನ್ನಲಾಗುತ್ತದೆಯೇ? ಇದನ್ನು ಪಾರ್ಲಿಮೆಂಟ್ ಮಾಡುವುದಕ್ಕಾಗುತ್ತದೆಯೇ? ಅದೇ ರೀತಿ, ಅಂಥ ಹಸ್ತಕ್ಷೇಪ ಇಲ್ಲೂ ಬೇಡವೆಂದು ನಾವು ಹೇಳುವುದು.

ಶ್ರೀ ಡಿ.ಬಿ.ಚಂದ್ರೇಗೌಡ: He is arguing my case. ಅದನ್ನು ಚುನಾವಣಾ ಆಯೋಗ ಹೇಳುವುದಕ್ಕೆ ಬರುವುದಿಲ್ಲ. ಸರ್ಕಾರ ಹೇಳಬೇಕು.

ಶ್ರೀ ಬಿ.ಸೋಮಶೇಖರ್: ಅದನ್ನು ಸರ್ಕಾರದವರು ಮಾಡುವುದು ಬೇಡ. ಚುನಾವಣಾ ಆಯೋಗದವರೇ ಮಾಡಲಿ. ಯಾವ್ಯಾವ ಕ್ಷೇತ್ರ ಎಲ್ಲಿರಬೇಕು? ಹಿಂದುಳಿದ ವರ್ಗದ ಕ್ಷೇತ್ರ ಇಲ್ಲಿರಬೇಕು, ಮಹಿಳೆಯರ ಕ್ಷೇತ್ರ ಇಲ್ಲಿರಬೇಕು ಇದರ ಬಗ್ಗೆ ಒಂದು ಮಾರ್ಗಸೂಚಿ ಅನ್ವಯ ಆಯೋಗದವರೇ ತೀರ್ಮಾನಿಸಲಿ. ಸರ್ಕಾರದವರು ಅದರಲ್ಲಿ ಹಸ್ತಕ್ಷೇಪ ಮಾಡುವುದು ಬೇಡ. ಎಲ್ಲ ಪಕ್ಷದವರಿಗೂ ಆರೋಗ್ಯಕರವಾದಂತಹ ಇದು ತೀರ್ಮಾನವಾಗುತ್ತದೆ. ಅದನ್ನೇ ನಾವು ಕೇಳುತ್ತಿದ್ದೇವೆ. ನಾನೊಂದು ಉದಾಹರಣೆ ಕೊಡುತ್ತೇನೆ, ಇವತ್ತು ಒಂದು ತಾಲೂಕಿನಲ್ಲಿ 2-3 ಕ್ಷೇತ್ರಗಳಿರುತ್ತವೆ. 3 ಜನ ಶಾಸಕರು ಆಯ್ಕೆಯಾಗುತ್ತಾರೆ. ಮಹಿಳೆಯರ ಕ್ಷೇತ್ರವನ್ನು ಅಲ್ಲಿಯ ಶಾಸಕರು ನನ್ನ ಕ್ಷೇತ್ರದಲ್ಲಿ ಬೇಡಿ, ಇನ್ನೊಂದು ಕಡೆ ಕೊಡಿ ಎಂದರೆ ಆ ಶಾಸಕರು ಒಬ್ಬರ ಮೇಲೊಬ್ಬರು ಬೀಳುತ್ತಾರೆ. ನಿಮ್ಮ ಪಕ್ಷದವರಿಗೆ ತಲೆ ನೋವಾಗುತ್ತದೆ. ಎಲ್ಲರಿಗೂ ತಲೆ ನೋವಾಗುತ್ತದೆ. ತಲೆ-ತಲೆ ಹೊಡೆದಾಡುತ್ತಾರೆ. ಅವರ ಹಿತದೃಷ್ಟಿಯಿಂದ, ಕಾಂಗ್ರೆಸ್ ಪಕ್ಷದ ಹಿತದಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ನಾವು ಶಾಸಕರು ಹೊಡೆದಾಡುವುದು ಬೇಡ. ಅದಕ್ಕೆ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಯಲಿ. ಆದ್ದರಿಂದ

(ಗೊಂದಲ)

ನಾವು ಹೇಳುವುದು ಸಮಂಜಸವಾಗಿದೆ. ಇದನ್ನು ನೀವೇನಾದರೂ ಒಪ್ಪದಿದ್ದರೆ, ಇನ್ನಾರು ತಿಂಗಳಲ್ಲಿ, ಈಗಾಗಲೇ ನೈತಿಕ ಶಕ್ತಿಯನ್ನು ಕಳೆದುಕೊಂಡಿದ್ದೀರಿ, ಗಾಯದ ಮೇಲೆ ಬರೆ ಎಳೆದ ಹಾಗಾಗುತ್ತದೆ. ಎಲ್ಲವನ್ನೂ ಕಳೆದುಕೊಳ್ಳುತ್ತೀರಿ. ಇದನ್ನು ತಾವು ಒಪ್ಪಿಕೊಳ್ಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಶ್ರೀ ಬಿ.ಸೋಮಶೇಖರ್‌ರವರು ಚರ್ಚೆಯನ್ನಾರಂಭಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು. ಎರಡನೆಯದಾಗಿ, ಅವರೇ, ಹೇಳಿದ್ದಾರೆ. ಚುನಾವಣಾ

ಆಯೋಗಕ್ಕೆ ಅಧಿಕಾರವಿಲ್ಲ, ಬೀದರ್ ಕ್ಷೇತ್ರವನ್ನು, ಮಳವಳ್ಳಿ ಕ್ಷೇತ್ರವನ್ನು ಬದಲಾವಣೆ ಮಾಡುವುದಕ್ಕೆ ಅಧಿಕಾರವಿಲ್ಲ, ಆದ್ದರಿಂದ ಈ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ಕೊಡಬೇಡಿ ಎಂದಿದ್ದಾರೆ. ಈ ಎರಡು ಕಾರಣಗಳಿಗಾಗಿ ಅವರಿಗೆ ಅಭಿನಂದನೆಗಳು.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಂಸದೀಯ ಸಚಿವರು ಅದು ದಿವಂಗತ ನಜೀರ್‌ಸಾಬ್‌ರವರು ಏನು ಮಂಡಲ್ ಪಂಚಾಯತ್ ವ್ಯವಸ್ಥೆಯನ್ನು ತಂದರೋ, ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದರೆಂದು ಕಾಣಿಸುತ್ತದೆ, ಆ ಬಿಲ್ಲಿನ ಮೇಲೆ ಇಂಪ್ರೂವ್ ಮಾಡುತ್ತಾರೆಂದು ನಮ್ಮ ಭಾವನೆ ಇತ್ತು. ಅದನ್ನು ಬಿಟ್ಟು, ನಾನು ಹಿಂದೆ ಹೇಳಿದ್ದೆ, ಒಂದು ಹುಲ್ಲು ಹಲ್ಲು ಮತ್ತು ಉಗುರಿಲ್ಲದ ಕಾನೂನನ್ನು ತಂದು, ಗ್ರಾಮ ಪಂಚಾಯತ್ ವ್ಯವಸ್ಥೆಯನ್ನು ತಂದಿದ್ದಾರೆ. ಅದರ ಬಗ್ಗೆ ಡೀಟೇಲಾಗಿ ಹೋಗುವುದಕ್ಕಿಂತ ಮುಖ್ಯವಾಗಿ ಈ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗದಲ್ಲಿರುವ ಅಧಿಕಾರವನ್ನು ತೆಗೆದುಕೊಳ್ಳಿ. ಮೊನ್ನೆ ಮೊನ್ನೆ ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಯಲ್ಲಿ ಚುನಾವಣಾ ಆಯೋಗದ ಮೂಲಕ ಲಾಟರಿ ಮೂಲಕ ರಿಸರ್ವೇಷನ್ ಮಾಡಿದ್ದರು. Games of the rule are equal to everybody. ಎಲ್ಲ ಪಕ್ಷದವರಿಗೂ ಒಂದೇ ನಿಯಮವಿತ್ತು. ಅದರಿಂದ ಕೆಲವರಿಗೆ ಸರಿಯಾಗಿರಬಹುದು, ಕೆಲವರಿಗೆ ತಪ್ಪಾಗಿರಬಹುದು. ಇವರಿಗೆ ಚುನಾವಣಾ ಆಯೋಗದ ಮೇಲೆ ನಂಬಿಕೆ ಇಲ್ಲದೆ ವಾಪಸ್ ತೆಗೆದುಕೊಂಡಿದ್ದಾರೆ. ಅದಕ್ಕಿಂತಲೂ ಶಾಸಕರಿಗೇ ಕೊಟ್ಟಿದ್ದರೆ ಸಂತೋಷವಾಗುತ್ತಿತ್ತು. ಅವರವರ ಕ್ಷೇತ್ರದಲ್ಲಿ ಅವರವರು ಮಾಡಿಕೊಳ್ಳುತ್ತಿದ್ದರು. ಅದನ್ನು ಮಾಡಿದ್ದರೆ, ಅವರಿಗೇನೂ ತೊಂದರೆಯಾಗುತ್ತಿರಲಿಲ್ಲ.

(ಗೊಂದಲ)

ಇನ್ನೊಂದು ಮುಖ್ಯವಾದ ವಿಷಯವನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ, ಹಿಂದೆ ನಾವು ಫಿಷರೀಸ್ ಬಿಲ್ ಇಂಟ್ರಡ್ಯೂಸ್ ಮಾಡಿದ್ದಾಗ, ಖರ್ಗೆಯವರು ಇದೇ ಸದನದಲ್ಲಿ ಕುಳಿತು ಒಂದು ಮಾತು ಹೇಳಿದ್ದರು, ಆರ್ಥಿಕ ಜ್ಞಾಪನಾಪತ್ರದಲ್ಲಿ ಪ್ರಸ್ತಾವಿತ ಕ್ರಮದಿಂದ ಯಾವ ಹೆಚ್ಚಿನ ವೆಚ್ಚವೂ ಉಂಟಾಗುವುದಿಲ್ಲವೆಂದು ಹೇಳುತ್ತಾರೆ. ಅದು ಸರಿಯಲ್ಲ.

4.20 ಪಿ.ಎಂ

ಈ ಒಂದು ಕಾರಣದಿಂದ ಈ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಹಾಗೂ ಪಾಸ್ ಮಾಡುವುದಕ್ಕೆ ಆಗುವುದಿಲ್ಲ, ಕಾರಣ ಏನೆಂದರೆ, ಇವತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆ ನಡೆದಿದೆ. ಈ ವಿಧೇಯಕವನ್ನು ಪಾಸ್ ಮಾಡಿದರೆ ಇನ್ನು ಮೂವತ್ತು ತಿಂಗಳುಗಳಲ್ಲಿ ಮತ್ತೊಂದು ಚುನಾವಣೆಯನ್ನು ನಡೆಸಬೇಕಾಗುತ್ತದೆ. ಪುನಃ ಚುನಾವಣೆ ಪ್ರಕ್ರಿಯೆ

ಪ್ರಾರಂಭವಾದಾಗ ಡೆಸಿಗ್‌ನೇಟೆಡ್ ಆಫೀಸರ್ಸ್‌ಗಳನ್ನು ಎಲ್ಲಾ ಕ್ಷೇತ್ರದ ಚುನಾವಣೆಯನ್ನು ನಡೆಸಲಿಕ್ಕೆ ಕಳುಹಿಸಬೇಕಾಗುತ್ತದೆ. ಆ ಸಂದರ್ಭದಲ್ಲಿ ವೆಚ್ಚ ಎಷ್ಟು ಆಗುತ್ತದೆ? ಈ ಒಂದು ಕಾರಣದಿಂದಲೇ ನಾವು ವಿಧೇಯಕವನ್ನು ಆಗ ಹಿಂದೆ ತೆಗೆದುಕೊಂಡು ಖರ್ಚು ಇಷ್ಟಾಗುತ್ತದೆಂದು ತಿಳಿಸಿ ಪುನಃ ಬಿಲ್ ಅನ್ನು ಇಂಟ್ರಡ್ಯೂಸ್ ಮಾಡಿದ್ದು. ಆದ್ದರಿಂದ, ಮಾನ್ಯ ಸಂಸದೀಯ ವ್ಯವಸಹಾರಗಳ ಸಚಿವರು ಪುನಃ ಆ ಕಡತವನ್ನು ದಯಮಾಡಿ ತೆಗಸಿ ಅದರ ಬಗ್ಗೆ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಪುನಃ ಇದಕ್ಕೆ ವೆಚ್ಚವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಈ ಅಂಶವನ್ನು ಮಾನ್ಯ ಕಾನೂನು ಸಚಿವರು ನೋಡಬೇಕು. ಆದ್ದರಿಂದ, ತಾವು ಈ ನಿಟ್ಟಿನಲ್ಲಿ ನೋಡುವುದಾದರೆ ಇದಕ್ಕೆ ತಾವು ಅನುಮತಿಸಬಾರದು, ಅಧ್ಯಕ್ಷರೆ ತಾವು ಬೇಕಾದರೆ ಆ ಕಡತವನ್ನು ತೆಗಸಿ ನೋಡಬೇಕು. ಅಂದು ನಾವು ಬಿಲ್ ಅನ್ನು ವಾಪಸ್ ತೆಗೆದುಕೊಂಡಿದ್ದೇವೆ. ನಮಗ ಆಗ ಅನುಮತಿ ನೀಡಲಿಲ್ಲ. ಬಿಲ್ ಅನ್ನು ವಾಪಸ್ ತೆಗೆದುಕೊಂಡು ಪುನಃ ಅದನ್ನು ಸಂಪುಟದಲ್ಲಿ ಪಾಸ್ ಮಾಡಿ ನಂತರ ಇಲ್ಲಿ ತಂದಿದ್ದು. ಬೇಕಾದರೆ ಇದರ ಬಗ್ಗೆ ತಾವು ಮಾಹಿತಿಯನ್ನು ತರಿಸಿಕೊಂಡು ನೋಡಬಹುದು.

ಶ್ರೀ ಸಿ.ಆರ್.ಸಗೀರ್ ಅಹಮದ್ (ಸಾರಿಗೆ ಸಚಿವರು): ನೀವು ಮಾಡಿದಂಥ ಕುತಂತ್ರಕ್ಕೆ ಇಡೀ ರಾತ್ರಿ ನಾವು ಸದನದಲ್ಲೇ ಮಲಗಿದ್ದೆವು. ಈಗ ಏನು ನಿಮ್ಮ ಜೊತೆಯಲ್ಲಿ ಬಾವಿಯಲ್ಲಿ ಇದ್ದಾರೆ ಆ ಸದಸ್ಯರು ಕೂಡ ನಮ್ಮೊಟ್ಟಿಗೆ ಇದ್ದರು. ಈಗ ಅವರು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ನಾವು ಎಲ್ಲರೂ ಇಲ್ಲಿ ನಿಂತಿದ್ದರೂ ತಾವು ಬಿಲ್ ಅನ್ನು ಪಾಸ್ ಮಾಡಿದರೆ ಹೇಗೆ? ತಾವು ಈ ಅಂಶವನ್ನು ಕೂಡ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆಂದು ನಾನು ತಮಗೆ ಹೇಳಬಯಸುತ್ತೇನೆ.

(ಗೊಂದಲ)

ಶ್ರೀ ಸಿ.ಚನ್ನಿಗಪ್ಪ: ಇವರು ಬೇಕೆಂದೇ ಸುಳ್ಳು ಹೇಳುತ್ತಿದ್ದಾರೆ, ಮಾಡಬಾರದು ಮಾಡಿ ಪುನಃ ಅದೇ ಆಗಬೇಕು ಎಂದು ಕುಳಿತಿದ್ದಾರೆ.

(ಗೊಂದಲ)

ಅಧ್ಯಕ್ಷರು: ವಿರೋಧಪಕ್ಷದ ನಾಯಕರು ಸುಮಾರು ನಾಲ್ಕು ಐದು ಜನ ಸದಸ್ಯರು ಮಾತನಾಡಿದ್ದಾರೆ, ಅವರು ಏನು ಮಾತನಾಡಿದ್ದಾರೆಂದರೆ, ಅವರು ಅಲ್ಲಿ ಹೋಗಿ ಮಾತನಾಡುತ್ತಾರೆ ಪುನಃ ಇಲ್ಲಿ ಬಂದು ನಿಲ್ಲುತ್ತಾರೆ ಇದು ನ್ಯಾಯವೆ? ನಿಮ್ಮ ಪ್ರಶ್ನೆಗಳು ಏನಿವೆ ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ, ಅವರಿಗೆ ಅವಕಾಶ ಮಾಡಿಕೊಡಿ. ಮಾನ್ಯ ಫೋರ್ಡೆಯವರೇ ತಾವು ಮಾತನಾಡಿ. ನೋಡಿ ನೀವುಗಳು

ಮಾತನಾಡುವಾಗ ಅವರು ಎಲ್ಲರೂ ಸುಮ್ಮನೆ ಇದ್ದರು, ಈಗ ಅವರು ಮಾತನಾಡುತ್ತಾರೆ ನೀವು ಸುಮ್ಮನೆ ಕೇಳಬೇಕು ಅಲ್ಲವೆ? No, no, I am very sorry. ನೀವುಗಳು ಈ ರೀತಿ ಗಲಾಟೆ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಕರಿಯಣ್ಣ: ಸನ್ಮಾನ್ಯ ಅಧ್ಯಕ್ಷರೆ, ಅಲ್ಲಿ ನಿಂತುಕೊಂಡು ಮಾತನಾಡಬಹುದೆ ಎನ್ನುವುದು ನನ್ನ ಪ್ರಶ್ನೆ? ಸದನದ ಬಾವಿಯಲ್ಲಿ ಇದ್ದು ಮಾತನಾಡುವ ಹಕ್ಕು ಸದಸ್ಯರಿಗೆ ಇದೆಯೇ?

ಅಧ್ಯಕ್ಷರು: ಸದನದ ಬಾವಿಯಲ್ಲಿರುವವರು ಯಾರೇ ಮಾತನಾಡಿದರೂ ಅದನ್ನು ಬರೆದುಕೊಳ್ಳಬೇಡಿ.

(ಗೊಂದಲ)

ಶ್ರೀ ಸಿ.ಚನ್ನಿಗಪ್ಪ: ಮೊನ್ನೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಮಂತ್ರಿಗಳ ಮುಂದೆ ಲಾಟರಿ ಮಾಡಿದಿರಿ. ದಯಮಾಡಿ ಈ ರೀತಿ ಮಾಡಬೇಡಿ, ಇದು ಪ್ರಜಾತಂತ್ರದ ಕಗ್ಗೊಲೆ, ತಾವು ಇದನ್ನು ಮಾಡಬಾರದು.

(ಗೊಂದಲ)

ಶ್ರೀ ಎಂ.ವೈ.ಘೋರ್ಪಡೆ: ಈ ವಿಧೇಯಕವನ್ನು ಏಕೆ ತಂದಿದ್ದೇವೆ ಎಂಬುದರ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಇದರ ಹಿನ್ನೆಲೆಯನ್ನು ನಾವು ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ಸಂಕ್ಷಿಪ್ತವಾಗಿ ಇದರ ಹಿನ್ನೆಲೆಯನ್ನು ನಾನು ಹೇಳುವುದಕ್ಕೆ ಪ್ರಯತ್ನಿಸುತ್ತೇನೆ. ಕರ್ನಾಟಕದ 1993ನೇ ಆ್ಯಕ್ಟ್ ಇದು ಪ್ರಥಮವಾಗಿ ಈ ದೇಶದಲ್ಲಿ 73ನೇ ಸಂವಿಧಾನ ತಿದ್ದುಪಡಿಯಾದ ನಂತರ ಮಾಡಿರತಕ್ಕಂಥದ್ದು. ನಾವು ಎಲ್ಲರೂ ಈ ಆ್ಯಕ್ಟ್‌ನ ಬಗ್ಗೆ ಸಾಕಷ್ಟು ಅಭಿಮಾನ ಇರತಕ್ಕಂಥವರು. ಕರ್ನಾಟಕದಲ್ಲಿ ನಾವು ಹೊಸದಾಗಿ ಮೂರು ಮುಖ್ಯ ಅಂಶಗಳನ್ನು ಈ ಆ್ಯಕ್ಟ್‌ನಲ್ಲಿ ಸೇರಿಸಿದ್ದೇವೆ. ಅವು ಯಾವುದೆಂದರೆ, ಮೊದಲನೆಯದು ಮೂರು ಹಂತದ ವ್ಯವಸ್ಥೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ. ಇದು ಇರಲಿಲ್ಲ ನಾವು ಇದನ್ನು ತಂದೆವು. ಎರಡನೆಯದು, ಇದರಲ್ಲಿ ಮೀಸಲಾತಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ, ಹೆಣ್ಣು ಮಕ್ಕಳಿಗೆ ಹಾಗೂ ಇತರೇ ಹಿಂದುಳಿದ ವರ್ಗಗಳು, ಇತರೇ ಹಿಂದುಳಿದ ವರ್ಗಗಳಿಗೆ ಮೊದಲು ಮೀಸಲಾತಿ ಇರಲಿಲ್ಲ. ಮೂರನೆಯದು ಯಾವುದು ಎಂದರೆ, ರೊಟೇಷನ್ ಪದ್ಧತಿ. 73ನೇ ತಿದ್ದುಪಡಿ ಪ್ರಕಾರ ರೊಟೇಷನ್ ಪದ್ಧತಿಯನ್ನು ಸೇರಿಸಿದ್ದೇವೆ. ಇವು ಮೂರು ಮುಖ್ಯವಾದಂತಹ ಅಂಶಗಳು ಈ 1993 ಆ್ಯಕ್ಟ್‌ನಲ್ಲಿ. ಅದರ ಪ್ರಕಾರ ನಾವು ಇತ್ತೀಚೆಗೆ ಗ್ರಾಮಪಂಚಾಯಿತಿ ಚುನಾವಣೆಯನ್ನು

ಬಹಳ ಯಶಸ್ವಿಯಾಗಿ ಮಾಡಿದ್ದೇವೆ....

(ಈ ಹಂತದಲ್ಲಿ ಸದನದ ಬಾವಿಯಲ್ಲಿರತಕ್ಕಂಥ ಸದಸ್ಯರು ಧಿಕ್ಕಾರ, ಧಿಕ್ಕಾರ ಎಂದು ಕೂಗುತ್ತಿದ್ದರು)

ಅಂದರೆ ಗ್ರಾಮ ಪಂಚಾಯಿತಿ ಚುನಾವಣೆ ಮಾಡಿದ್ದಕ್ಕೆ ಧಿಕ್ಕಾರವೆ?...

(ಗೊಂದಲ)

ನಾನೇನು ಹೇಳುತ್ತಿದ್ದೇನೆ ಅದನ್ನು ಕೇಳುವುದಕ್ಕೆ ಇವರು ತಯಾರು ಇಲ್ಲವೆಂದರೆ ಹೇಗೆ? ನಾನೇನು ಮಾಡಲಿ... ಹಳೆಯ ಪಾಳೇಗಾರಿಕೆ ವ್ಯವಸ್ಥೆಯನ್ನು ನಾನು ನೋಡಿದ್ದೇನೆ.

(ಗೊಂದಲ)

ಅಧ್ಯಕ್ಷರು: ಈ ಸಭೆಯ ನಿಯಮಾವಳಿಗಳ ಪ್ರಕಾರ ಈ ಸಭೆಯ ಘನತೆ ಗೌರವಗಳನ್ನು ಎತ್ತಿಹಿಡಿಯುವುದು ಹಾಗೂ ಸಭೆಯನ್ನು ನಡೆಸಿಕೊಂಡು ಹೋಗುವುದು ನನ್ನ ಕರ್ತವ್ಯವಾಗಿದೆ. ಮಾನ್ಯ ಮಂತ್ರಿಗಳು ಈಗಾಗಲೇ ಈ ವಿಧೇಯಕದ ಬಗ್ಗೆ ಉತ್ತರ ಹೇಳಿದ್ದಾರೆ ಹಾಗೂ ಈ ಬಿಲ್‌ನ ಮೇಲೆ ಅನೇಕ ಸದಸ್ಯರು ಮಾತನಾಡಿದ್ದಾರೆ. ತಮ್ಮ ತಮ್ಮ ಸ್ಥಾನದಲ್ಲಿ ಹೋಗಿ ಮಾತನಾಡಿದ್ದಾರೆ.

(ಗೊಂದಲ)

ನೀವು ಎಲ್ಲರೂ ಇಲ್ಲಿಯೇ ಇರಬೇಕಾಗಿತ್ತು ಏಕೆ ಅಲ್ಲಿಗೆ ಹೋಗಿ ಮಾತನಾಡಿದಿರಿ?

(ಗೊಂದಲ)

ಈಗ ವಿಧೇಯಕವು ಪರ್ಯಾಲೋಚನೆಯಾಗಿದೆ, ಪರ್ಯಾಲೋಚನೆಯ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2000ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

ಖಂಡ 2ರಿಂದ 13ರವರೆಗೆ

ಅಧ್ಯಕ್ಷರು: ''ಖಂಡ 2ರಿಂದ 13ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ರಿಂದ 13ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ-1 ಇತ್ಯಾದಿ**

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): 2000ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, ''2000ರ ಕರ್ನಾಟಕ ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

ಅಧ್ಯಕ್ಷರು: ಈಗ ಸಭೆ ಮುಕ್ತಾಯವಾಗಿದೆ. ನಾಳೆ ಬೆಳಿಗ್ಗೆ 11ಕ್ಕೆ ಪುನಃ ಸಮಾವೇಶಗೊಳ್ಳುವುದು.

(ಸದನವು ಸಂಜೆ ನಾಲ್ಕು ಗಂಟೆ ಮೂವತ್ತೆರಡು ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ: ಇಪ್ಪತ್ತಮೂರನೇ ಮಾರ್ಚ್ ಮಾಹೆ ಎರಡು ಸಾವಿರ ಇಸವಿಯ ಗುರುವಾರದಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕಾಸೂ. 08 ಸಶಾಮು. ತುಮಕೂರು, 350 ಪುಸ್ತಕಗಳು ದಿ: 9-8-2001.